**ಓ.ಎಸ್. 48/18** **ಡಿ.ಡಬ್ಲ್ಯೂ: 1**

**<u>ದಿನಾಂಕ: 07.07.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.</u>**

## <u>ಪಾಟೀಸವಾಲು: ವಾದಿಪರ ವಕೀಲರಾದ ಶ್ರೀ ಹೆಚ್.ಬಿ.ಎಮ್ ಅವರಿಂದ</u> –

1. ನಾನು ದಿ:25.09.2014 ರಂದು ದಾವಾ ಸ್ವತ್ತನ್ನು ಕ್ರಯಕ್ಕೆ 5,00,000/– ರೂ.ಗಳಿಗೆ ಬರೆದುಕೊಡುತ್ತೇನೆ ಎಂದು ಒಪ್ಪಿ ಅದರ ಪೈಕಿ 3,25,000/– ರೂ.ಗಳನ್ನು ನಗದು ರೂಪದಲ್ಲಿ ಪಡೆದು ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸುಳ್ಳು. ಸದರಿ ಕ್ರಯದ ಕರಾರು ಪತ್ರಕ್ಕೆ ನಾನು ಸಾಕ್ಷಿಗಳ ಸಮಕ್ಷಮ ಸಹಿ ಕೂಡ ಮಾಡಿರುತ್ತೇನೆ ಎಂದರೆ ಸುಳ್ಳು.

2. ಈ ಹಂತದಲ್ಲಿ ಸಾಕ್ಷಿದಾರರಿಗೆ ತಾನು ನಿಪಿ.1 ಅನ್ನು ತೋರಿಸಿ, ಅದರಲ್ಲಿ ನೀವು ಸಹಿ ಮಾಡಿದ್ದು ನಿಪಿ.1(ಎ) ನಿಮ್ಮ ಸಹಿ ಆಗಿರುತ್ತದೆ ಎಂದರೆ ಅದು ನನ್ನ ಸಹಿ ಅಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಅದೇ ರೀತಿ ಸದರಿ ಕ್ರಯದ ಕರಾರು ಪತ್ರದ 2 ನೇ ಪುಟದಲ್ಲಿರುವ ಸಹಿ ಕೂಡ ನನ್ನದಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಿಪಿ.1,2 ರಲ್ಲಿರುವ ಯಾವುದೇ ಸಹಿಗಳು ಕೂಡ ನನ್ನದಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನ್ಯಾಯಾಲಯದ ಮೂಲಕ ನಿಪಿ.1,2 ರಲ್ಲಿರುವ ಸಹಿಗಳನ್ನು ಕೈಬರಹ ತಜ್ಞರಿಗೆ ಕಳುಹಿಸಲು ನನ್ನ ಅಭ್ಯಂತರ ಇಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

**ಮುಂದುವರಿದ ಪಾಟೀಸವಾಲು:** ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.